06	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ	1046
07	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ	1280
08	ಲಾಲ್‌ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆರ್.ಟಿ.ನಗರ	484
09	ಶ್ರೀಮತಿ ವಿ.ಹೆಚ್.ಡಿ ಗೃಹ ವಿಜ್ಞಾನ ಕಾಲೇಜು	1061

ಇ) ರಾಜಾಜಿನಗರದಲ್ಲಿ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

851 (1306) ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಮತ್ತು ಇನ್ನಿತರ ಪ್ರದೇಶಗಳಲ್ಲಿ ಎಷ್ಟು ಘೋಷಿತ ಕೊಳಚೆ ಪ್ರದೇಶಗಳು ಇವೆ (ಸ್ಥಳಗಳ ವಿವರ ತಿಳಿಸುವುದು)

ಆ) ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರ ಪುನರಾಭಿವೃದ್ಧಿಗೆ ಸರ್ಕಾರ ಯಾವ ಯಾವ ಸಂಸ್ಥೆಗಳ ಸಹಭಾಗಿತ್ವದಲ್ಲಿ ಯೋಜನೆಯನ್ನು ರೂಪಿಸಲಾಗಿದೆ.

ಇ) ಈ ಯೋಜನೆಯ ರೂಪರೇಷೆಗಳು ಮತ್ತು ಕಾರ್ಯಾನುಷ್ಠಾನ ಯಾವ ಹಂತದಲ್ಲಿವೆ.

ಈ) ಈ ಯೋಜನೆಯನ್ನು ಖಾಸಗಿ ಸಂಸ್ಥೆಗೆ ವಹಿಸುವ ಬದಲಾಗಿ ಕರ್ನಾಟಕ ಗೃಹ ಮಂಡಳಿಗೆ ಸಂಪೂರ್ಣವಾಗಿ ವಹಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ಹೊರೆ ಕಡಿಮೆ ಆಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ ಕೊಳಚೆ ನಿರ್ಮೂಲನ ಪುನರಾಭಿವೃದ್ಧಿಗಾಗಿ ಈಗಾಗಲೇ ಎಷ್ಟು ಸರ್ಕಾರಿ ಜಮೀನನ್ನು ಕಾಯ್ದಿರಿಸಲಾಗಿದೆ?

ಶ್ರೀ ಡಿ. ಬಿ. ಜಯಕುಮಾರ್ (ವಸತಿ ಸಚಿವರು):

ಅ) ಬೆಂಗಳೂರು ನಗರದಲ್ಲಿ ಘೋಷಿತಗೊಂಡ 218 ಕೊಳಚೆ ಪ್ರದೇಶಗಳು ಮತ್ತು ರಾಜ್ಯದ ಇನ್ನಿತರ ಪ್ರದೇಶಗಳಲ್ಲಿ ಘೋಷಿತಗೊಂಡ 1739 ಕೊಳಚೆ

ಪ್ರದೇಶಗಳಿರುತ್ತವೆ. ಕೊಳಚೆ ಪ್ರದೇಶಗಳ ವಿವರ (ಜಿಲ್ಲಾವಾರು)ವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಈ ಯೋಜನೆಗೆ ಸಂಬಂಧಿಸಿದ ಕಾರ್ಯನೀತಿಯನ್ನು ರೂಪಿಸುವ ಕೆಲಸ ಪ್ರಗತಿಯಲ್ಲಿದ್ದು, ಇದು ಪೂರ್ಣಗೊಂಡ ನಂತರ ಸಹಬಾಗಿತ್ವದಲ್ಲಿ ಪಾಲುಗೊಳ್ಳುವ ಸಂಸ್ಥೆಗಳ ಹೆಸರು ಲಭ್ಯವಾಗಲಿದೆ.

ಇ) ಸನ್ಮಾನ್ಯ ವಸತಿ ಸಚಿವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಕರ್ನಾಟಕ ಗೃಹ ಮಂಡಳಿಯ ಆಯುಕ್ತರು ಹಾಗೂ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಆಯುಕ್ತರು ಏಪ್ರಿಲ್ 7 ಮತ್ತು 8 ರಂದು ಮುಂಬೈ ನಗರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಕೊಳಚೆ ಪ್ರದೇಶಗಳನ್ನು ಭೇಟಿ ಮಾಡಿ ಬಂದಿರುತ್ತಾರೆ. ಇದರನ್ವಯ ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆ ಕಾರ್ಯ ನೀತಿಯನ್ನು ರೂಪಿಸಲು ಕರ್ನಾಟಕ ಗೃಹ ಮಂಡಳಿಯ ಸಹಮತಿಯೊಂದಿಗೆ ಸರ್ಕಾರದ ಮಟ್ಟದಲ್ಲಿ ಕಾರ್ಯನೀತಿಯ ಬಗ್ಗೆ ಈಗಾಗಲೇ ಕಾರ್ಯತಂತ್ರ, ವಿಧಿ ವಿಧಾನ ರೂಪಿಸಲಾಗುತ್ತಿದೆ.

ಈ) ಹೌದು.

ಉ) ಇಲ್ಲ. ಆದರೆ ಈ ಯೋಜನೆಯಡಿ ಆಯ್ಕೆ ಮಾಡಿದ ಸರ್ಕಾರದ ಜಮೀನಿನಲ್ಲಿರುವ ಕೊಳಚೆ ಪ್ರದೇಶಗಳ ನಿರ್ಮೂಲನಾ ಪುನರಾಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿರುವ ಪ್ರದೇಶಗಳಲ್ಲಿ ಸರ್ಕಾರವು ಇತ್ಯರ್ಥಗೊಳಿಸುವ ಅನುಪಾತದ ಮೇರೆಗೆ ಖಾಸಗಿ ಸಂಸ್ಥೆಗೆ ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಭೂಮಿಯನ್ನು ಲಭ್ಯ ಮಾಡಿ ಮನೆಗಳನ್ನು ಉಚಿತವಾಗಿ ಖಾಸಗಿ ಸಂಸ್ಥೆಯವರು ನಿರ್ಮಿಸಿಕೊಡಬೇಕಾಗುತ್ತದೆ.

Karnataka Slum Clearance Board Districtwise Identified, declared and Undecleared Slums

Sl. No.	Name of the District	No.of Slum	No.of Slums	
			Decleard	Un decleard
1	2	3	4	5
1	Bangalore City	473	218	255
2	Bangalore Rural	79	63	16
3	Bagalkote	93	31	62
4	Bellary	149	115	34
5	Belgaum	98	80	18
6	Bidar	72	50	22

7	Bijapur	83	83	0
8	Chikkamagalore	60	49	11
9	Chitradurga	58	43	15
10	Chamarajnagar	54	42	12
11	Davanagere	80	72	8
12	Dharwad	89	89	0
13	D. Kannada	28	22	6
14	Gadag	71	60	11
15	Gulbarga	144	136	8
16	Hassan	113	105	8
17	Haveri	60	57	3
18	Kodagu	12	12	0
19	Kolar	92	86	6
20	Koppal	56	47	9
21	Mandya	64	52	12
22	Mysore	98	83	15
23	Raichur	60	57	3
24	Shimoga	162	162	0
25	Tumkur	97	90	7
26	U.Kannada	58	32	26
27	Udupi	27	21	6
	Total	**2530**	**1957**	**573**

852 (804) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿರುವ ಅಧ್ಯಾಪಕರ, ಮುಖ್ಯೋಪಾಧ್ಯಾಯರ ಹಾಗೂ ದೈಹಿಕ ಶಿಕ್ಷಕರ ಕೊರತೆಯನ್ನು ನೀಗಿಸಲು ಸರ್ಕಾರದ ಮುಂದಿರುವ ಪ್ರಸ್ತಾವನೆಗಳಾವುವು;

ಆ) ಈ ಕೊರತೆಯಿಂದಾಗಿ ಶೈಕ್ಷಣಿಕ ಚಟುವಟಿಕೆಗಳಿಗೆ ಅನಾನುಕೂಲವಾಗುತ್ತಿರುವುದರಿಂದ ಅದನ್ನು ತಪ್ಪಿಸಲು ಸರ್ಕಾರದ ಸಕಾಲಿಕ ಕ್ರಮಗಳೇನು?

ಇ) ಪ್ರೌಢ ಶಾಲೆಗಳಲ್ಲಿ ಶಾಲಾ ಕೊಠಡಿಗಳ ಕೊರತೆಯನ್ನು ನೀಗಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):